ಕೊಡಬೇಕು ಎಂದು ಹೇಳಿ ಕೇಂದ್ರಸರ್ಕಾರದವರು ಒಂದು ಗೈಡ್‌ಲೈನ್ಸ್ ಕೊಟ್ಟಿರುವುದರಿಂದ ಅದರ ಪ್ರಕಾರ ನಾವು ಡಿಸ್ಟ್ರಿಬ್ಯೂಟ್ ಮಾಡಿರುತ್ತೇವೆ. ಈಗ 18 ಸಾವಿರಕ್ಕಿಂತ ಮೇಲಿನ ಆದಾಯ ಇರತಕ್ಕದ್ದು ಇದ್ದರೆ ಅದು ದನ ಸಾಯಲಿ ಅಥವಾ ಅವನ ಹುಲ್ಲಿಗೆ ಮೆದೆ ಎಂದು ನಾವು ಹೇಳುತ್ತೇವೆ, ಅದಕ್ಕೆ ಬೆಂಕಿ ಬಿದ್ದರೆ ಕೂಡ ಅದಕ್ಕೆ ಕೊಡುವುದಕ್ಕೆ ಬರುವುದಿಲ್ಲ. ಈ ಎನ್.ಸಿ.ಎಫ್.ನಲ್ಲಿ ಸಹಾಯ ಮಾಡುವುದು ಎಂದರೆ ಸಾಯುವ ಮನುಷ್ಯನಿಗೆ ನೀರು ಹಾಕಿದ ಹಾಗೆ ಅಷ್ಟೆ, ಸಂಪೂರ್ಣ ಬದುಕಿಸುವುದಕ್ಕೆ ಆಗುವುದಿಲ್ಲ. ಅತ್ಯಂತ ತೊಂದರೆ ಇರುವ ಸಮಾಜದ ಮನುಷ್ಯನಿಗೆ ಸ್ವಲ್ಪಮಟ್ಟಿಗೆ ಸಹಾಯವಾಗಲಿ ಎಂದು ಹೇಳಿ ಈ ಫಂಡ್‌ನಿಂದ ಸಹಾಯ ಮಾಡುತ್ತೇವೆ. ಇವತ್ತು ರಮೇಶ ಜಿಗಜಿಣಗಿ ಅಥವಾ ನಾಗೇಗೌಡರ ಆದಾಯ ಒಂದು ವರ್ಷಕ್ಕೆ ಎರಡು ಲಕ್ಷ ರೂಪಾಯಿ ಇದ್ದರೆ, ಅವರಿಗೆ ಐದುನೂರು ರೂಪಾಯಿ ಕೊಟ್ಟರೆ ಏನು ಪ್ರಯೋಜನ? ಅದಕ್ಕೆ ಅತ್ಯಂತ ಬಡವರಿಗೆ, ಸಣ್ಣ ರೈತರಿಗೆ ರಿಲೀಫ್ ಕೊಡುವುದು ಈಗಾಗಲೇ ನಾವು ಮಾಡುತ್ತಿದ್ದೇವೆ. ಇದನ್ನು ಜಾಸ್ತಿ ಮಾಡಬೇಕು ಎಂದು ಹೇಳಿ. ಈ ಸದನದಲ್ಲಿ ಬಹಳಷ್ಟು ಸಲ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ, ಇದರ ಬಗ್ಗೆ ನಾನು ಖಂಡಿತವಾಗಿಯೂ ಪುನಃ ಕೇಂದ್ರಸರ್ಕಾರಕ್ಕೆ ಬರೆಯುತ್ತೇನೆ ಎಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಉಪಾಧ್ಯಕ್ಷರು: ಆಯಿತು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ರಾಜ್ಯಸರ್ಕಾರ ಏನಾದರೂ ಸಹಾಯ ಮಾಡಬೇಕು ಎನ್ನುವುದರ ಬಗ್ಗೆ ಒಂದೆರಡು ಮಾತು ಹೇಳಿಬಿಡಿ. ಇಲ್ಲದಿದ್ದರೆ ಒಂದು ಕೆಲಸ ಮಾಡಿ. ಫೈಯರ್ ಬ್ರಿಗೇಡ್‌ಗೆ ಆದೇಶ ಕೊಟ್ಟುಬಿಡಿ. ಸಣ್ಣಮನೆಗೆ ಬೆಂಕಿಬಿದ್ದರೆ ಹೋಗಿ, ದೊಡ್ಡ ಮನೆಗೆ ಬೆಂಕಿಬಿದ್ದರೆ ಹೋಗಬೇಡಿ ಎಂದು ಫೈರ್ ಬ್ರೀಗೇಡ್‌ನವರಿಗೆ ಹೇಳಿಬಿಡಿ. ತಾವು ರಾಜ್ಯಸರ್ಕಾರ ಏನಾದರೂ ಪರಿಶೀಲನೆ ಮಾಡಬೇಕು, ಸ್ವಾಮಿ. ಬಹಳ ಕಷ್ಟ ಇದೆ.

(ಉ) ಬಸ್‌ದರ ಏರಿಕೆಯಿಂದ ನಡೆದ ಸತ್ಯಾಗ್ರಹದಲ್ಲಿ ಭಾಗವಹಿಸಿದ ವ್ಯಕ್ತಿಗಳ ಮೇಲೆ ಹಾಕಿರತಕ್ಕ ಕೇಸ್‌ಗಳನ್ನು ಹಿಂದಕ್ಕೆ ಪಡೆಯುವುದು.

ಶ್ರೀ ರಾಜಶೇಖರ ವಿ.ಶೀಲವಂತ (ಗುಳೇದಗುಡ್ಡ): ಸನ್ಮಾನ್ಯ ಉಪಾಧ್ಯಕ್ಷರೆ, ಕಳೆದ ಮಾರ್ಚ್ ತಿಂಗಳಲ್ಲಿ ಕೆ.ಎಸ್.ಆರ್.ಟಿ.ಸಿ.ಬಸ್ಸು ದರವನ್ನು ಸರ್ಕಾರ ಒಮ್ಮಿಂದೊಮ್ಮೆಲೆ ಏರಿಸಿದ್ದರಿಂದ ರಾಜ್ಯದಲ್ಲಿ ವಿವಿಧ ಕಡೆ ಸಾಕಷ್ಟು ಸಂಘಸಂಸ್ಥೆಗಳು ಹಾಗೂ ರಾಜಕೀಯ ಪಕ್ಷಗಳು ಧರಣಿ ಸತ್ಯಾಗ್ರಹ ಹಾಗೂ ಬಸ್‌ಬಂದ್ ಕಾರ್ಯಕ್ರಮವನ್ನು ರಾಜ್ಯಾದ್ಯಂತ ಹಾಕಿಕೊಳ್ಳಲಾಯಿತು. ಧರಣ, ಸತ್ಯಾಗ್ರಹ ಸಹಿತ ಯಶಸ್ವಿಯಾಗಿ ಅವರು ಮಾಡಿದ್ದರು. ಆದರೆ ಯಾವುದೇ ರೀತಿಯಿಂದ ದಾಂಧಲೆ ಮಾಡಿಲ್ಲ. ಎಲ್ಲೂ ಸಹ ಒಂದು ಘಟನೆ ಶಾಂತಿಯುತವಾಗಿ ಇದನ್ನು ಮಾಡಿದ್ದರಿಂದ ಆಗಲಿಲ್ಲ. ನಂತರದಲ್ಲಿ ಕೆಲವೊಂದು ಕಡೆ ಸತ್ಯಾಗ್ರಹ ಮಾಡಿದಂಥ ವ್ಯಕ್ತಿಗಳ ಮೇಲೆ ಪೊಲೀಸ್ ಕೇಸ್ ಮಾಡಿ ಆಮೇಲೆ ಕೋರ್ಟಿಗೆ

ಸಹ ಹಾಜರುಪಡಿಸಲಾಯಿತು. ಕೋರ್ಟಿನಿಂದ ಜಾಮೀನು ಪಡೆದು ಹೊರಗೆ ಬರುವಂಥ ಸನ್ನಿವೇಶವಾಯಿತು. ಕೆಲವೊಂದು ಕಡೆ ಸಾಕಷ್ಟು ದಾಂಧಲೆಗಳು ಆದರೂ ಸಹಿತ ಕೆಲವು ಕಡೆ ಆರೆಸ್ಟ್ ಮಾಡಿಲ್ಲ, ಸುಮ್ಮನೆ ಪೋಲೀಸ್ ರೆಕಾರ್ಡ್ ಮಾಡಿಕೊಂಡು ನಂತರ ಹಾಗೆಯೇ ಬಿಟ್ಟರು. ನಂತರದಲ್ಲಿ ಬೆಳಗಾಮ್ ಜಿಲ್ಲೆಯಲ್ಲಿ ಒಂದು ವಿಶೇಷ ಘಟನೆ ಏನಾಯಿತು ಎಂದರೆ 26 ಜನ ಹೆಣ್ಣುಮಕ್ಕಳು ಸೇರಿ 112 ಜನರನ್ನು ಜೈಲಿಗೆ ಸಹಿತ ತಳ್ಳಲಾಯಿತು.

1.50 ಪಿಎಂ

ಇಷ್ಟೆಲ್ಲಾ ಕಳ್ಳತನ ಆದಮೇಲೆ ದಿನಾಂಕ 23-3-97ರಂದು ಅಧಿವೇಶನ ನಡೆಯುವಂಥ ಸಮಯದಲ್ಲಿ ಇದರ ಬಗ್ಗೆ ಸಾಕಷ್ಟು ಚರ್ಚೆಗಳಾದವು, ಕೊನೆಗೆ ಯಾವುದೋ ಒಂದು ದರಕ್ಕೆ ಈ ಬಸ್‌ದರವನ್ನು ಫಿಕ್ಸ್ ಮಾಡಿದಿರಿ, ಈ ಮಾತನ್ನು ಮಾನ್ಯ ಮುಖ್ಯಿ ಮಂತ್ರಿಗಳು ಸದನದಲ್ಲಿ ಕೊಟ್ಟರು, ಮಾನ್ಯ ಯಡಿಯೂರಪ್ಪನವರು ಕೇಳಿದ ಮಾತಿಗೆ ಎಲ್ಲಾ ಕೇಸುಗಳನ್ನು ವಾಪಸ್ಸು ತೆಗೆದುಕೊಳ್ಳುವಂತೆ ನಾವು ಮಾಡುತ್ತೇವೆ ಎನ್ನುವಂಥ ಮಾತನ್ನು ಅಂದಿನ ಸದನದಲ್ಲಿ ಕೊಟ್ಟಿದ್ದರೂ ಕೂಡ ಈ ಕೇಸನ್ನು ಇಲ್ಲಿಯವರೆಗೆ ವಾಪಸ್ಸು ತೆಗೆದುಕೊಳ್ಳುವಂಥ ಪ್ರಕ್ರಿಯೆ ಶುರು ಆಗಿಲ್ಲ. ಮತ್ತು ಸಾಕಷ್ಟು ಸಾವಿರಾರು ಕಾರ್ಯಕರ್ತರು ಮತ್ತು ಬೇರೆ ಬೇರೆ ಸಂಘಸಂಸ್ಥೆಯ ಸದಸ್ಯರು ಇವತ್ತು ಕೂಡ ಇದರಿಂದ ಬಹಳ ತೊಂದರೆ ಅನುಭವಿಸುತ್ತಿದ್ದಾರೆ. ಆದ್ದರಿಂದ ಈ ಕೇಸುಗಳನ್ನು ವಾಪಸ್ಸು ತೆಗೆದುಕೊಳ್ಳುವಂತೆ ಮಾನ್ಯ ಕಾನೂನು ಸಚಿವರನ್ನು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಸಚಿವರು): ಮಾನ್ಯ ಉಪಸಭಾಧ್ಯಕ್ಷರೆ, ನಾವು ನಮ್ಮ ರಾಜ್ಯದಲ್ಲಿ ಹಲವಾರು ಪ್ರತಿಭಟನೆಗಳನ್ನು ಆಗಿಂದಾಗ್ಗೆ ಮಾಡುತ್ತೇವೆ. ಕೆಲವು ಸಂದರ್ಭಗಳಲ್ಲಿ ರಾಜ್ಯ ಸರ್ಕಾರ ತೆಗೆದುಕೊಂಡಿರುವ ತೀರ್ಮಾನಗಳ ವಿರುದ್ಧ ಉದಾಹರಣೆಗೆ ವಿದ್ಯುತ್ ದರ ಏರಿಕೆ ಬಗ್ಗೆಯಾಗಲಿ, ಬಸ್‌ದರ ಏರಿಕೆ ಬಗ್ಗೆಯಾಗಲಿ, ಹಾಲಿನ ದರ ಏರಿಕೆ ಬಗ್ಗೆಯಾಗಲಿ ಇಂತಹ ಸಂದರ್ಭಗಳಲ್ಲಿ ಪ್ರತಿಭಟನೆಗಳನ್ನು ಮಾಡಿ ಸರ್ಕಾರದ ಗಮನ ಸೆಳೆಯತಕ್ಕಂಥದ್ದು ಸಾಮಾನ್ಯ. ಮಾನ್ಯ ಸದಸ್ಯರು ಹೇಳಿದಾಗ ಬಸ್ ದರ ಏರಿಕೆ ಮಾಡಿದಾಗ ಸ್ವಲ್ಪ ಮಟ್ಟಿಗೆ ಪ್ರತಿಭಟನೆ ರಾಜ್ಯದ ಎಲ್ಲಾ ಕಡೆ ಮಾಡಿದ್ದಾರೆ. ಈ ಪ್ರತಿಭಟನೆ ಕೆಲವು ಸಂದರ್ಭಗಳಲ್ಲಿ ಹಿಂಸಾ ರೂಪಕ್ಕೆ ತಿರುಗಿ ಬಸ್ಸುಗಳನ್ನು ಸುಡುವುದು, ಖಾಸಗಿ ಮತ್ತು ಸಾರ್ವಜನಿಕರ ಆಸ್ತಿಪಾಸ್ತಿಗಳಿಗೆ ನಷ್ಟ ಮಾಡತಕ್ಕಂಥದ್ದು ಮತ್ತು ಇನ್ನು ಕೆಲವು ಸಂದರ್ಭಗಳಲ್ಲಿ ಬೆಂಕಿ ಹಚ್ಚತಕ್ಕಂಥ ಪ್ರಕರಣ ಬಂದಾಗ ಆರ್ಸನ್, ಲೂಟಿಂಗ್ ಮಾಡುವಂಥ ಕೆಲವು ಸಂದರ್ಭಗಳಲ್ಲಿ ಬಹಳ ಕಷ್ಟವಾಗುತ್ತದೆ. ನಾನು ಈಗಾಗಲೇ ಇಂತಹ ಹಲವಾರು ಪತ್ರಗಳು ಬಂದಾಗ ತಮಗೆ ಗೊತ್ತಿರುವಹಾಗೆ ಕೋಲಾರ ಜಿಲ್ಲೆ ಹಾಲಿನ ದರ ಏರಿಕೆ ಬಗ್ಗೆ ಬಹು ದೊಡ್ಡ ಪ್ರಮಾಣದಲ್ಲಿ ಪ್ರತಿಭಟನೆ

ನಡೆಯಿತು. ಇದೇ ಸಂದರ್ಭದಲ್ಲಿ ರಾಜ್ಯ ಸರ್ಕಾರದವರು ಈ ರೀತಿಯ ಪ್ರತಿಭಟನೆ ವಿಕೋಪಕ್ಕೆ ಹೋಗಿದ್ದರು ಅದನ್ನು ಹಿಂದಕ್ಕೆ ತೆಗೆದುಕೊಳ್ಳುವ ಕ್ರಮವನ್ನು ಮಾಡಿದ್ದೇವೆ. ಮತ್ತು ಅದರಂತೆ ಹಿಂದಕ್ಕೆ ಕೂಡ ಪಡೆದುಕೊಂಡಿದ್ದೇವೆ, ತಾವು ಈಗಾಗಲೇ ಹೇಳಿದ ಹಾಗೆ ಸಾರ್ವಜನಿಕರ ಪ್ರತಿಭಟನೆ ಸರ್ಕಾರದ ಗಮನ ಸೆಳೆಯುವುದಕ್ಕೆ ಮತ್ತು ಕಡೆಗೂ ಸರ್ಕಾರ ಸ್ವಲ್ಪ ಮಟ್ಟಿಗೆ ದರವನ್ನು ಇಳಿಸಿದಾದ ಮೇಲೆ ಪ್ರತಿಭಟನೆ ಶಾಂತಿವಾಯಿತು ಎಂದು ಹೇಳಿದ್ದೀರಿ, ನೀವು ಸರ್ಕಾರದ ಗಮನಕ್ಕೆ ತಂದಿದ್ದೀರಿ, ಸರ್ಕಾರ ಇದರ ಬಗ್ಗೆ ಈಗಾಗಲೇ ಒಂದು ಕ್ರಮವನ್ನು ಕೈಗೊಂಡಿದೆ. 2-3 ಸಂದರ್ಭಗಳಲ್ಲಿ ಕೂಡ ಕ್ರಮವನ್ನು ಕೈಗೊಂಡಿದ್ದೇವೆ. ನಾವು ಈಗಾಗಲೇ ಡೈರೆಕ್ಟರ್ ಆಫ್ ಪ್ರಾಸಿಕ್ಯೂಷನ್‌ಗೆ ಹೇಳಿ ಸಂಬಂಧಪಟ್ಟ ಎಲ್ಲಾ ಜಿಲ್ಲೆಗಳಲ್ಲಿ ಎಷ್ಟು ಪ್ರಕರಣ ನಡೆದಿದೆ ಮತ್ತು ಯಾವ ಯಾವ ಸೆಕ್ಷನ್ ಅಡಿಯಲ್ಲಿ ಅವರ ಮೇಲೆ ಮೊಕದ್ದಮೆ ಹೂಡಿದ್ದಾರೆ ಎನ್ನತಕ್ಕಂಥದ್ದನ್ನೂ ಕೂಡ ಪರಿಶೀಲಿಸಿದ್ದೇವೆ. ಕೆಲವು ಸಂದರ್ಭಗಳಲ್ಲಿ ಸೆಕ್ಷನ್ 307 ವಿಧಿಸಿರುತ್ತಾರೆ, ನಿಜ ನಾನು ಇದನ್ನು ಒಪ್ಪಬೇಕಾಗುತ್ತದೆ, ಸೆಕ್ಷನ್ 323 ಮತ್ತು 324 ಇಲ್ಲದಿದ್ದಮೇಲೆ ಸೆಕ್ಷನ್ 307 ಏಕೆ ಎಂದು ಪ್ರಶ್ನೆ ಬರುತ್ತದೆ ನಿಜ ನಾನು ಇದನ್ನು ಒಪ್ಪುತ್ತೇನೆ. ಕೆಲವು ಸಂದರ್ಭಗಳಲ್ಲಿ ಬೆಂಕಿ ಹಚ್ಚತಕ್ಕ ಪ್ರಕರಣಗಳು ಉಂಟು. ಖಾಸಗಿ ಆಸ್ತಿ ಮತ್ತು ಸಾರ್ವಜನಿಕರ ಆಸ್ತಿಗಳಿಗೆ ಬೆಂಕಿ ಹಚ್ಚತಕ್ಕ ಪ್ರಕರಣಗಳು ಮತ್ತು ಬಸ್‌ಗಳಿಗೆ ಬೆಂಕಿ ಹಚ್ಚತಕ್ಕ ಪ್ರಕರಣಗಳೂ ಕೂಡ ಬರುತ್ತವೆ. ಇಂತಹ ಸಂದರ್ಭಗಳಲ್ಲಿ ನಾವು ಈ ಕೇಸುಗಳನ್ನು ವಿಂಗಡಣೆ ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರು ಮತ್ತು ಮಾನ್ಯ ಯಡಿಯೂರಪ್ಪನವರು ಇದರ ಬಗ್ಗೆ ಈಗಾಗಲೇ ಮಾತನಾಡಿದ್ದಾರೆ. ನಾನು ಇದರ ಬಗ್ಗೆ ಈಗಾಗಲೇ ಒಂದು ಪ್ರಕ್ರಿಯೆ ಶುರು ಮಾಡಿದ್ದೇನೆ. ಇದರ ಬಗ್ಗೆ ಒಂದು ಕಾರ್ಯಕ್ರಮವನ್ನು ತೆಗೆದುಕೊಂಡು, ಬಹುಶಃ ಆ ಸೆಕ್ಷನ್ ಹಾಕಿರುವುದು ಮತ್ತು ಆರ್ಸನ್ ಲೂಟಿಂಗ್ ಇಲ್ಲದೇ ಇರತಕ್ಕಂಥ ಪ್ರಶ್ನೆ ಬಂದಾಗ ನಾವು ಇದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಆದುದರಿಂದ ಇದರ ಬಗ್ಗೆ ಸರ್ಕಾರದ ಗಮವನ್ನು ಸೆಳೆದಿದ್ದೀರಿ, ನಾನು ಈಗಾಗಲೇ ಪ್ರಕ್ರಿಯೆ ಶುರು ಮಾಡಿದ್ದೇನೆ. ಪುನಃ ಇದನ್ನು ಒಂದು ಹಂತಕ್ಕೆ ತಲುಪಿಸಿ ಯಾವ ಯಾವ ಪ್ರಕರಣಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಜೊತೆಗೆ ಸಮಾಲೋಚಿಸಿ ಮತ್ತು ಲಾ ಇಲಾಖೆಯೊಂದಿಗೆ ಚರ್ಚೆ ಮಾಡಿ ಈ ಒಂದು ಕ್ರಮವನ್ನು ಮುಂದುವರಿಸುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಬಯಸುತ್ತೇನೆ.

ಶ್ರೀ ಎ.ರಾಮದಾಸ್ (ಕೃಷ್ಣರಾಜ್): ಮಾನ್ಯ ಉಪ ಸಭಾಧ್ಯಕ್ಷರೆ, ಇದರಲ್ಲಿ ನನ್ನ....

(ಗೊಂದಲ)

ಉಪಸಭಾಧ್ಯಕ್ಷರು: ನೋಡಿ ಪ್ರತಿ ಸಾರಿ ತಾವು ಎದ್ದು ನಿಂತರೆ ಹೇಗೆ? ಎಲ್ಲರೂ ಪ್ರಶ್ನೆ ಮಾಡುವಂಥ ಸಂದರ್ಭದಲ್ಲಿ ಎಲ್ಲರೂ ಎದ್ದು ನಿಂತರೆ ಅದು ಸಾಧ್ಯವಾಗಲಾರದು, ಆದ್ದರಿಂದ ತಾವು ದಯಮಾಡಿ ಕುಳಿತು ಕೊಳ್ಳಿ.

(ಗೊಂದಲ)

ಶ್ರೀ ಎ.ರಾಮದಾಸ್: ಮಾನ್ಯ ಉಪಸಭಾಧ್ಯಕ್ಷರೆ, ನನ್ನ ಮೇಲೆ ಕ್ರಿಮಿನಲ್ ಕೇಸ್ ಹಾಕಿದ್ದಾರೆ, ಅದು ಇನ್ನೂ ನಡೆಯುತ್ತಿದೆ.

ಉಪಾಧ್ಯಕ್ಷರು: ನೋಡಿ ಯಾರು ಪ್ರಶ್ನೆ ಕೇಳುತ್ತಾರೋ ಅವರು ಮಾತ್ರ ನಿಲ್ಲಬೇಕು ಅದು ಬಿಟ್ಟು ಎಲ್ಲರೂ ನಿಂತು ಬಿಟ್ಟರೆ ಅದು ಹೇಗೆ? ಯಡಿಯೂರಪ್ಪನವರೇ, ತಾವು ವಿರೋಧ ಪಕ್ಷದ ನಾಯಕರಿದ್ದೀರಿ. ತಾವು ಹೀಗೆ ಮಾಡಿದರೆ ಹೇಗೆ?

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಉಪಸಭಾಧ್ಯಕ್ಷರೆ, ನಾನು ಸಹಿ ಮಾಡಿದ್ದೇನೆ.

ಉಪಸಭ್ಯಾಕ್ಷರು: ನೋಡಿ ಎರಡು ಗಂಟೆಯಾಯಿತು ಇನ್ನೂ 5 ಜನರು ಇದ್ದಾರೆ. ಹೀಗಾದರೆ ಶೂನ್ಯವೇಳೆಯನ್ನು ಮುಗಿಸಬೇಕಾಗುತ್ತದೆ, ನೀವು ಮುಗಿಸಿ ಪರವಾಗಿಲ್ಲ ಎಂದರೆ ನಾವು ಮುಗಿಸುತ್ತೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಉಪಸಭಾಧ್ಯಕ್ಷರೆ, ಮಾನ್ಯ ಕಾನೂನು ಸಚಿವರೆ, ರಾಮದಾಸ್‌ರವರು ಏನು ಹೇಳುತ್ತಾರೆಂದರೆ ಟೈರ್‌ನಗಾಳಿ ಬಿಟ್ಟಿದ್ದಾರೆ ಎಂದು ರಾಮದಾಸ್‌ರವರ ಮೇಲೆ ಮತ್ತು ಗುಳೇದಗುಡ್ಡದ ಶಾಸಕರ ಮೇಲೆ ಕೇಸ್ ಹಾಕಿದ್ದಾರೆ. ಈ ರೀತಿ ಘಟನೆ ನಡೆದಿಲ್ಲ ಆದಕಾರಣ ಆ ಕೇಸ್‌ನ್ನು ತರಿಸಿ ವಿತ್‌ಡ್ರಾ ಮಾಡಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿ ಎಂದು ಕೇಳುತ್ತಿದ್ದಾರೆಯೇ ವಿನಾಃ ಬೇರೆ ಏನೂ ಇಲ್ಲ.

ಶ್ರೀ ಎಂ.ಸಿ.ನಾಣಯ್ಯ: ಇಂತಹ ಪ್ರಕರಣಗಳು ನಡೆದಾಗ ಪೋಲಿಸ್‌ನವರು ಸೆಕ್ಷನ್ 35ರ ಅಡಿಯಲ್ಲಿ ಕೇಸ್ ಹಾಕುತ್ತಾರೆ. 35ನೆ ಸೆಕ್ಷೆನ್ ಅನ್ನು ಡಿಫೈ ಮಾಡಿದಾಗ ಅರೆಸ್ ಮಾಡಿಕೊಂಡು ಹೋದಂತಹ ಪ್ರಕರಣಗಳು ಎಷ್ಟೋ ಇವೆ. ತಮಗೆ ಗೊತ್ತಿರುವ ಹಾ ನಾನು ಕಾನೂನು ಸಚಿವರು ಆದಮೇಲೆ ಸುಮಾರು 37 ಸಾವಿರ ಪ್ರಕರಣಗಳನ್ನು ಹಿಂದಕ್ಕೆ ತೆಗೆದುಕೊಂಡಿದ್ದೇವೆ. ಮುಂಚೆ ಅದು 5 ವರ್ಷ ಮೇಲ್ಪಟ್ಟು ಮತ್ತು 3 ವರ್ಷ ಮೇಲ್ಪಟ್ಟು ಆಗಿತ್ತು, ಈಗ ಅದು ಒಂದು ವರ್ಷದ ಒಳಗಡೆ ಇರತಕ್ಕಂಥ ಪ್ರಕರಣಗಳೂ ಕೂಡ ಹಿಂದಕ್ಕೆ ತೆಗೆದುಕೊಂಡಿದ್ದೇವೆ. ಬಹುಶಃ ಈ ಪ್ರಕರಣದ ಆ ಒಂದು ವ್ಯಾಪ್ತಿ ಎಲ್ಲಿ ಬರುವ ಹಾಗಿದ್ದರೆ ಅದನ್ನೂ ಕೂಡ ಹಿಂದಕ್ಕೆ ತೆಗೆದುಕೊಳ್ಳುವಂಥ ಕ್ರಮವನ್ನು ನಾನು ಈಗಾಗಲೇ ಶುರು ಮಾಡಿದ್ದೇನೆ, ಸ್ವಲ್ಪ ಮಟ್ಟಿಗೆ ತಾವು ಸಮಾಧಾನವಾಗಿರಿ ಮಾಡೋಣ

ಉಪಾಧ್ಯಕ್ಷರು: ಶ್ರೀರಾಮರೆಡ್ಡಿಯವರೇ, ನೀವು ದಯಮಾಡಿ ಎರಡು ನಿಮಿಷ ಪ್ರಸ್ತಾಪ ಮಾಡಿ ಏಕೆಂದರೆ ಈಗಾಗಲೇ ಎರಡು ಗಂಟೆ ಸಮಯ ಆಗುವುದರಿಂದ ಭೋಜನ ಸಮಯವಿರುವುದರಿಂದ ತಾವು ಬೇಗ ಮುಗಿಸಿ.